ಸ್ಮರಿಸುವ ಹಾಗೇ! ಇನ್ನು, ಆ ಹುಡುಗರೊಡನೆ ಸೇರಿ ಸದಾ ಪುಂಡಾಡುವ ಮೋಜುಮಸ್ತಿಯೂ ಇಲ್ಲದಿಲ್ಲ. ವೈನು, ಡೈನು, ವೀಡು... ಬಿಯರು... ಎಂಬೆಲ್ಲ ಖಾಯಿಷೂ ಕಡಿಮೆಯಿಲ್ಲ. ಮೊದಲಿನಿಂದಲೂ ಫ್ರಾಕು–ಫ್ರಿಲ್ಲಿಗೆ ಹಾತೊರೆದಿದ್ದೇ ಇಲ್ಲ. ಪ್ಯಾಂಟು–ಶರ್ಟು, ಟೀ–ಬರ್ಮುಡಾಗಳ ಖಯಾಲಿಯೇ ಹೆಚ್ಚು. ಇಂತಹ ಅವಳು, ಯಾವನಾದರೂ ಹುಡುಗನ ಹೆಸರು ಹೇಳುವಾಗಲೆಲ್ಲ ಯಾರೆಂದು ಫಕ್ಕನೆ ಗೊತ್ತಾಗದೆ, ಯಾವ ಹೆಸರಿಗೆ ಯಾವ ಮೋರೆಯೆಂದು ಕನ್ಫ್ಯೂಸಾಗುವುದು! 'ಏನಮ್ಮ ನೀನು! ಎಷ್ಟು ಸಲ ಹೇಳೋದು ಅವನು ಶಬೀರ್ ಕಣಮ್ಮ, ದಿಲೀಪ್ ಅಲ್ಲ...' ಎಂದು ಗೊಳ್ಳನೆ ನಕ್ಕು ತಿದ್ದುವಳು. 'ಅಲ್ಲವೇ, ಚಿನ್ನೂ... ಇವರಲ್ಲೇ ಯಾರನ್ನಾದರೂ ಕಟ್ಟಿಕೋಬಾರದೇನೆ? ಯಾವ ಜಾತಿ ಆದರೂ ಪರವಾಗಿಲ್ಲ... ಸುಮ್ಮನೆ ಇವನು ಅಂತ ಬೊಟ್ಟಿಟ್ಟು ತೋರು ಅಷ್ಟೆ, ನಾನೇ ಕರಕೊಂಡು ಬಂದು ಕಟ್ಟುತೀನಿ...' ಅಂತಂದರೆ, 'ಥೂ ಹೋಗಮ್ಮ... ದೆ ಆರ್ ಜಸ್ಟ್ ಮೈ ಫ್ರೆಂಡ್ಸ್. ಗೆಳೆಯರನ್ನ ಮದುವೆ ಮಾಡಿಕೊಂಡರೆ ಗೆಳೆತನ ಸಾಯುತ್ತೆ... ನಾವೇ ಅದನ್ನ ಕೊಲ್ಲೋದಾಗುತ್ತೆ!' ಎಂದು ನಗುವಳು. ವಿಚಿತ್ರವನಿಸುವುದು. ಚಿಂತೆಯೂ ಆಗುವುದು. ಈ ಜಗತ್ತಿನಲ್ಲಿ ಇವಳಿಗೆ ವರನಾಗಿ ಒದಗಬಲ್ಲ ಗಂಡಸರೆಲ್ಲ ಗೆಳೆಯರಾಗಿಬಿಟ್ಟರೆ? ಮನೋವಾಂಛೆಗೆ ಆಗುವವರಾರು? ಮೈಬಯಕೆ ನೀಗುವವರಾರು? ಇವಳೊಲ್ಲೆಂದರೂ ಮೈಯೊಳಗಿನ ಹೆಣ್ಣತನವು ಸುಮ್ಮನಿದ್ದೀತೆ? ಮೈಯೆಂಬುದು ಮನಸೊಳಕ್ಕೂ ಹೊಕ್ಕು ಹೊಂಚಿ ಅಟ್ಟಾಡಿಸುವುದಷ್ಟೆ? ಯೋಚನೆಯಾಗುವುದು. ಒಬ್ಬ ತಾಯಿಯಾಗಿ, ಇವನ್ನೆಲ್ಲ ಮಗಳಿಗೆ ತಿಳಿಹೇಳುವುದೆಂತು?

ಅಂತೂ ಇಂತೂ, ಒಮ್ಮೆ ಸಮಯಸಾಧಿಸಿ ಸೂಕ್ಷ್ಮವಾಗಿ ಸೂಚಿಸಿದೆ. ಗಂಡನ ಮೂಲಕವೇ ಹೇಳಿಸಿದೆ.

'ಓಹ್ ಅಮ್ಮಾ... ಯು ಆರ್ ಟೂ ಮಚ್!' ಅಂದಳು. 'ಅದಕ್ಕೆಲ್ಲ ಬೇರೆ ಬೇರೆ ಉಪಾಯ ಇವೆ!!'

ವ್ವಾಟ್ಟ್?! ಹೌಹಾರಿದ್ದಾಯಿತು. ಉಪಾಯವೆಂದರೆ? ಅರ್ಥವಾಗದೆ ಕಂಗೆಟ್ಟೆ. ಏನಿರಬಹುದು ಇವಳ ಹಿಂದಿನ ದಿಟವಾದ ಸತ್ಯ?!

'ಅಮ್ಮ... ನೀನು ಯಾವ ಕಾಲದಲ್ಲಿದ್ದೀ? ಜಗತ್ತು ಬದಲಾಗಿದೆ...'

'ಏನೂಂತ ಬಿಡಿಸಿ ಹೇಳು, ಚಿನ್ನು...'

'...!!'

'ಚಿನ್ನು... ಚಿನ್ನು...' ಎಂದು ಲಲ್ಲೆಗರೆಯುತ್ತ, ನುಣುಚಿ ಹೋದವಳನ್ನು ಹಿಂಬಾಲಿಸಿ ದುಂಬಾಲುಬಿದ್ದೆ. 'ಏನಾದರೂ ತಪ್ಪುದಾರಿ ಹಿಡಿದಿಲ್ಲ ತಾನೇ?'

'ತಪ್ಪು ದಾರಿ ಅಂದರೇನಮ್ಮಾ?' ನಕ್ಕಳು. 'ಐ ಜಸ್ಟ್ ಸೆಡ್– ದೆರಾರ್ ಅದರ್ ಮೆಥಡ್ಸ್ ಫಾರ್ ದಿ ಬಾಡಿ ಅಂತ... ಅಷ್ಟೆ!'

'ಅಲ್ಲವೇ ಚಿನ್ನೂ, ಈಗೆಲ್ಲ ಅದೇನೋ ಸಲಿಂಗ ವಿಲಿಂಗ ಅಂತೆಲ್ಲ ಇದೆಯಂತಲ್ಲೆ?!'

ಚಿನ್ನು, ಒಂದು ಕ್ಷಣಕ್ಕೆ ಪೆಚ್ಚಾಗಿ– ಮುಂದಿನ ಕ್ಷಣಕ್ಕೆಲ್ಲ, ಬಾಂಬು ಸಿಡಿಯುವಂತೆ ನಕ್ಕಳು. 'ಥೂ... ಏನೇನೋ ಅಂದುಕೋಬೇಡಮ್ಮ... ನಿಜ ಹೇಳುತೀನಿ, ನಾನು ಲೆಸ್ಬಿಯನ್ ಅಲ್ಲ... ಆಯಿತಾ?!'

ನಮ್ಮಿಬ್ಬರ ಮಾತು ಕೇಳಿಸಿಕೊಂಡಿದ್ದ ನೀಲಿಯೂ ಎಡ್ರಾಬಿರ್‍ರಿ ನಕ್ಕರು. ನನಗೆ ಅವಮಾನವೇ ಮೊದಲಾದಂತನ್ನಿಸಿತು.